**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**
**ಸಿ.ಸಿ ನಂ.6856/2024**

ಪಿರ್ಯಾದಿದಾರರುಃ ವಿರುದ್ಧ ಆರೋಪಿ

| ಪಿರ್ಯಾದಿದಾರರುಃ | ಆರೋಪಿ |
|---|---|
| ಸರಕಾರದ ಪರವಾಗಿ ಹರಿಹರ ಗ್ರಾಮಾಂತರ ಪೋಲಿಸ್ ಠಾಣೆ | 1) ಕೊಂಡಜ್ಜಿ ಸುರೇಶಪ್ಪ ತಂದೆ ಸಿದ್ದಪ್ಪ, 53 ವರ್ಷ, ಕೃಷಿಕರು, ವಾಸಃ ದೀಟೂರು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ.<br>2) ಕೃಷ್ಣ ಯಾನೇ ಕಾಂತ ತಂದೆ ಹನುಮಂತಪ್ಪ, 29 ವರ್ಷ, ಕೃಷಿಕರು, ವಾಸಃ ಡೋರ್ ನಂ.129, 2 ನೇ ಬ್ಲಾಕ್ ವಾರ್ಡ್ನಂಃ10, ಹೊನ್ನಾಳ್ಳಿ ಟೌನ್, ದಾವಣಗೆರೆ.<br>3) ರಘುವೀರ ತಂದೆ ಜೋಗಳಿ ಕೆಂಚಪ್ಪ, 26 ವರ್ಷ, ಕೂಲಿ, ವಾಸಃ ಡೋರ್ ನಂ.150, ಚಿಕ್ಕಬಿದರೆ ಕ್ಯಾಂಪ್, ಹರಿಹರ ತಾಲ್ಲೂಕು, ದಾವಣಗೆರೆ.<br>4) ಲಕ್ಷ್ಮಣ ತಂದೆ ತಿಪ್ಪೇಶಪ್ಪ, 29 ವರ್ಷ, ಕೃಷಿಕರು, ವಾಸಃ ಎ ಪಿ ಎಂ ಸಿ ಹತ್ತಿರ, 2 ನೇ ಮೇನ್, 4 ನೇ ಕ್ರಾಸ್, ಭರತ್ ಕಾಲೋನಿ, ದಾವಣಗೆರೆ.<br>5) ಹನುಮಂತಪ್ಪ ತಂದೆ ಸುರೇಶಪ್ಪ, 29 ವರ್ಷ, ಕೃಷಿಕರು, ವಾಸಃ ದೀಟೂರು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ.<br>6) ಮೋಹನ ಯಾನೇ ಮಹದೇವ ತಂದೆ ಕೊಂಡಜ್ಜಿ ಸುರೇಶಪ್ಪ, 26 ವರ್ಷ, ಕೃಷಿಕರು, ವಾಸಃ ದೀಟೂರು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ. |

7) ಮಂಜುನಾಥ ತಂದೆ ಕೊಂಡಜ್ಜಿ ಸುರೇಶಪ್ಪ,
25 ವರ್ಷ, ಕೃಷಿಕರು,
ವಾಸಃ ದೀಟೂರು ಗ್ರಾಮ,
ಹರಿಹರ ತಾಲ್ಲೂಕು, ದಾವಣಗೆರೆ.

ದಂಡ ಪ್ರಕ್ರಿಯಾ ಕಲಂ **313** ರ ಅಡಿ ಆರೋಪಿತರ ಹೇಳಿಕೆ

ಪ್ರಶ್ನೆಃ 1 ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ

| | |
|---|---|
| ಆ.1: | ಆ.5: |
| ಆ.2: | ಆ.6: |
| ಆ.3: | ಆ.7: |
| ಆ.4: | |

ಪ್ರಶ್ನೆಃ 2 ಫ್ರಾಸಾ.1 ಅಸುಂಡಿ ರುದ್ರಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.2 ರಿಂದ 4 ಹಾಗೂ ಆರೋಪಿತರ ಪರಿಚಯ ಇರುವುದಾಗಿ, ದಿನಾಂಕಃ 24.08.2024 ರಂದು ಸಂಜೆ 6.30 ಗಂಟೆಗೆ ದೇವಸ್ಥಾನದ ರಸ್ತೆಯಿಂದ ಮನೆಗೆ ಹೋಗುತ್ತಿದ್ದಾಗ ಸುರೇಶ, ಮಂಜ, ಮಾದೇವ, ರಘು, ಕೃಷ್ಣ ಮತ್ತು ಇತರರು ಬಂದು ಏಕಾಏಕಿ ತನ್ನನ್ನು ತರುಬಿ ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಕಟ್ಟಿಗೆ ಮತ್ತು ಕಲ್ಲುಗಳಿಂದ ತನ್ನನ್ನು ಹೊಡೆದರುವುದಾಗಿ, ಸುರೇಶಪ್ಪ ಮತ್ತು ಅವರ ಮಕ್ಕಳು ತನಗೆ ಕಲ್ಲಿನಿಂದ ಮತ್ತು ಕಟ್ಟಿಗೆಯಿಂದ ಬೆನ್ನಿಗೆ ಮತ್ತು ಹೊಟ್ಟೆಗೆ ಹೊಡೆದಿದ್ದು, ಸದರಿ ಸಂದರ್ಭದಲ್ಲಿ ಸುರೇಶಪ್ಪ ಮತ್ತು ಅವರ ಮಕ್ಕಳು ನೀನು ದೂರು ನೀಡಿದರೆ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುವುದಾಗಿ, ಅದೇ ದಿನ ರಾತ್ರಿ 10.30 ರ ಸುಮಾರು ಹರಿಹರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು 2 ದಿನಗಳ ನಂತರ ತಾನು ಠಾಣೆಗೆ ಹೋಗಿ ದೂರು ನೀಡಿರುವುದಾಗಿ, ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ತಾನು ದೂರು ನೀಡಿದ ಮಾರನೇ ದಿನ ಪೊಲೀಸರು ಮಧ್ಯಾಹ್ನ 1.00 ರಿಂದ 1.30 ರ ಸುಮಾರು ಸ್ಥಳಕ್ಕೆ ಬಂದು ಪಂಚನಾಮೆ ಜರುಗಿಸಿ, ಘಟನೆ ಬಗ್ಗೆ ಬರೆದುಕೊಂಡಿರುವುದಾಗಿ, ಸದರಿ ಸಂದರ್ಭದಲ್ಲಿ ಚಾಸಾ.2 ಮತ್ತು 3 ರವರು ಇದ್ದರು. ಸದರಿ ಸಂದರ್ಭದಲ್ಲಿ ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೊಲೀಸರು ಒಂದು ಕೋಲು ಮತ್ತು ಒಂದು ಕಲ್ಲನ್ನು ಜಪ್ತು ಪಡಿಸಿಕೊಂಡಿರುವುದಾಗಿ, ಸಾಕ್ಷಿಯು ಗುರುತಿಸಿದ ಕೋಲು ಮತ್ತು ಕಲ್ಲನ್ನು ಕ್ರಮವಾಗಿ ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. 5 ರಿಂದ 7

ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 1 ರಿಂದ 4 ನೇ ಆರೋಪಿತರು ಗೈರು ಹಾಜರಿರುವುದಾಗಿ, ಅವರ ಗುರುತಿಸುವಿಕೆ ಬಗ್ಗೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ಹೇಳಿರುವುದಾಗಿ ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1: ಆ.5:

ಆ.2: ಆ.6:

ಆ.3: ಆ.7:

ಆ.4:

ಪ್ರಶ್ನೆಃ 3 ಪ್ರಾಸಾ.2 ನಾಗರಾಜಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1, 3 ಮತ್ತು 4 ರವರ ಪರಿಚಯ ಇರುವುದಾಗಿ, ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದು ಕೃತ್ಯ ನಡೆದ ಸ್ಥಳ ಮತ್ತು ಅಮಾನತು ಪಂಚನಾಮೆ ಆಗಿದ್ದು ಅದನ್ನು ನಿಪಿ.2 ಎಂದು ಗುರುತಿಸಿದ್ದು,ಅದರಲ್ಲಿರುವ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ದಿನಾಂಕಃ 24.03.2024 ರಂದು ಸಂಜೆ 6.30 ಗಂಟೆಗೆ ಚಾಸಾ.1 ಮತ್ತು 1 ನೇ ಆರೋಪಿಯ ನಡುವೆ ಜಗಳ ಆಗುತ್ತಿತ್ತು. ಆಗ ತಾನು ಬಂದು ಜಗಳವನ್ನು ಬಿಡಿಸಿರುವುದಾಗಿ, ಚಾಸಾ.1 ಮತ್ತು 1 ನೇ ಆರೋಪಿ ಒಬ್ಬರಿಗೊಬ್ಬರು ಹೊಡೆದಾಡುತ್ತಿದ್ದರು. 1 ನೇ ಆರೋಪಿ ಮತ್ತು ಅವರ ಕಡೆಯವರು ಕೈ ಮತ್ತು ಕಲ್ಲಿನಿಂದ ಹೊಡೆಯುತ್ತಿದ್ದು, ಸದರಿ ಜಗಳದಲ್ಲಿ ಆರೋಪಿ ಚಾಸಾ.1 ರವರಿಗೆ ಚಾಸಾ.1 ರವರು ಆರೋಪಿತರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, ಗಲಾಟೆಯಾದ 2-3 ದಿನಗಳ ನಂತರ ಪೊಲೀಸರು ಸ್ಥಳಕ್ಕೆ ಬಂದಿರುವುದಾಗಿ, ಪೊಲೀಸರು ಗಲಾಟೆ ಬಗ್ಗೆ ವಿಚಾರಣೆ ಮಾಡಿ ತನಗೆ ಸಹಿ ಮಾಡು ಎಂದು ಹೇಳಿದ್ದು, ಆಗ ತಾನು ಸಹಿ ಮಾಡಿದ್ದು, ಸದರಿ ಸಂದರ್ಭದಲ್ಲಿ ತನ್ನೊಂದಿಗೆ ಚಾಸಾ.1 ಮತ್ತು 3 ರವರು ಇದ್ದರು. ಸದರಿ ಕಾಲಕ್ಕೆ ಪೊಲೀಸರು ಛಾಯ ಚಿತ್ರ ತೆಗೆದಿರುವುದಾಗಿ, ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ನಿಪಿ. 3 ಮತ್ತು 4 ಎಂದು ಗುರುತಿಸಲಾಗಿದೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1: ಆ.5:

ಆ.2: ಆ.6:

ಆ.3: ಆ.7:

ಆ.4:

ಪ್ರಶ್ನೆಃ 4 ಪ್ರಾಸಾ.3 ಹರೀಶ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1 ತನ್ನ ತಂದೆ ಎಂದು, ದಿನಾಂಕಃ 24.08.2024 ರಂದು ಸಂಜೆ 6.00 ಗಂಟೆಗೆ ಸುರೇಶಪ್ಪ ಮತ್ತು ಅವರ ಮಕ್ಕಳು ತನ್ನ ತಂದೆ ಮೇಲೆ ಹಲ್ಲೆ ಮಾಡಿದ್ದು, ತನ್ನ ತಂದೆ ಮಹೇಶ್ವರ ದೇವಸ್ಥಾನದ ಬಳಿ ನಿಂತುಕೊಂಡಾಗ ಸುಮಾರು 7-8 ಜನ ಬಂದು ಹಲ್ಲೆ ಮಾಡಿರುವುದಾಗಿ, ಸದರಿ ಸಂದರ್ಭದಲ್ಲಿ ತಾನು ಮಹೇಶ್ವರ ದೇವಸ್ಥಾನಕ್ಕೆ

ಹೋಗುತ್ತಿದ್ದು, ಸದರಿ ಸಂದರ್ಭದಲ್ಲಿ ತನ್ನ ತಂದೆಗೆ ಕೊಂಡಜ್ಜಿ ಸುರೇಶ, ರಘು, ಮಂಜುನಾಥ, ಮಹಾದೇವ ಇನ್ನು ಇಬ್ಬರು ಹಲ್ಲೆ ಮಾಡುತ್ತಿದ್ದರು. ಮಹದೇವ ಎನ್ನುವವರು ಕಲ್ಲು ಮತ್ತು ಕೋಲಿನಿಂದ ತನ್ನ ತಂದೆಗೆ ಬೆನ್ನಿಗೆ ಮತ್ತು ತಲೆಗೆ ಹೊಡೆದಿದ್ದು, ಉಳಿದವರು ಕೈಯಿಂದ ಹೊಡೆಯುತ್ತಿದ್ದರು. ಸದರಿಯವರೆಲ್ಲರೂ ತನ್ನ ತಂದೆಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಸುರೇಶ ಮತ್ತು ಅವರ ಮಕ್ಕಳು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ತನ್ನ ತಂದೆಗೆ ಜೀವ ಬೆದರಿಕೆ ಹಾಕಿರುವುದಾಗಿ, ಸದರಿ ಹಲ್ಲೆಯಿಂದ ತನ್ನ ತಂದೆಗೆ ತಲೆಗೆ, ಬೆನ್ನು ಮತ್ತು ಸೊಂಟಕ್ಕೆ ಪೆಟ್ಟಾಗಿತ್ತು. ತನ್ನ ತಂದೆಯನ್ನು ತಾನೇ ಹರಿಹರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ದಿನಾಂಕಃ 25.08.2024 ರಂದು ತನ್ನ ತಂದೆ ಠಾಣೆಗೆ ದೂರು ನೀಡಿರುವುದಾಗಿ, ಈ ಎಲ್ಲಾ ವಿಚಾರವಾಗಿ ತಾನು ಪೊಲೀಸರಿಗೆ ಹೇಳಿಕೆ ನೀಡಿರುವುದಾಗಿ, ಸಾಕ್ಷಿಯು ಗುರುತಿಸಿದ ಕೋಲು ಮತ್ತು ಕಲ್ಲನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಸದರಿ ವ್ಯಕ್ತಿಗಳನ್ನು ತಾನು ನೋಡಿದರೆ ಗುರುತಿಸುವುದಾಗಿ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

| | |
|---|---|
| ಆ.1: | ಆ.5: |
| ಆ.2: | ಆ.6: |
| ಆ.3: | ಆ.7: |
| ಆ.4: | |

ಪ್ರಶ್ನೆಃ 5 ಫ್ರಾಸಾ.4 ಮಂಜುನಾಥ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1 ಮತ್ತು 2 ರವರ ಪರಿಚಯವಿದೆ ಎಂದು, ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದು ಪಂಚರಿಗೆ ನೀಡಿದ ನೋಟಿಸ್ ಆಗಿದ್ದು ಅದನ್ನು ನಿಪಿ.5 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದು ಕೃತ್ಯ ನಡೆದ ಸ್ಥಳ ಮತ್ತು ಅಮಾನತು ಪಂಚನಾಮೆ ಆಗಿದ್ದು ಅದನ್ನು ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕಃ 27.08.2024 ರಂದು ಮಧ್ಯಾಹ್ನ 1.30 ಗಂಟೆ ಸುಮಾರು ದೀಟೂರು ಗ್ರಾಮದ ಮಹೇಶ್ವರ ದೇವಸ್ಥಾನದ ಹತ್ತಿರ ಚಾಸಾ.1 ಮತ್ತು 1 ನೇ ಆರೋಪಿಯ ನಡುವೆ ಆದ ಗಲಾಟೆ ವಿಚಾರವಾಗಿ ಪಂಚನಾಮೆ ಜರುಗಿಸಲು ಬಂದ ಸಂದರ್ಭದಲ್ಲಿ ಮಾಡಿದ್ದು, ಸದರಿ ಸಂದರ್ಭದಲ್ಲಿ ತಾನು ಚಾಸಾ.1 ಮತ್ತು 2 ರವರು ಇರುವುದಾಗಿ, ಸದರಿ ಕಾಲಕ್ಕೆ ಪೊಲೀಸರು ಛಾಯ ಚಿತ್ರ ತೆಗೆದಿದ್ದು, ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ನಿಪಿ. 3 ಮತ್ತು 4 ಎಂದು ಗುರುತಿಸಲಾಗಿದೆ. ಸದರಿ ಸಂದರ್ಭದಲ್ಲಿ ಪೊಲೀಸರು 1 ಕಲ್ಲು ಮತ್ತು ಕಟ್ಟಿಗೆಯನ್ನು ತೆಗೆದುಕೊಂಡು ಛಾಯ ಚಿತ್ರ ತೆಗೆಸಿರುತ್ತಾರೆ. ಸದರಿ ಕಲ್ಲು ಮತ್ತು ಕಟ್ಟಿಗೆಯನ್ನು ನೋಡುತ್ತಿರುವುದಾಗಿ, ಸಾಕ್ಷಿಯು ಗುರುತಿಸಿದ 1 ಕೋಲು ಮತ್ತು ಕಲ್ಲನ್ನು ಕ್ರಮವಾಗಿ ಮು.ಮಾ.1 ಮತ್ತು 2 ಎಂದು

ಗುರುತಿಸಲಾಗಿದೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

| | |
|---|---|
| ಆ.1: | ಆ.5: |
| ಆ.2: | ಆ.6: |
| ಆ.3: | ಆ.7: |
| ಆ.4: | |

ಪ್ರಶ್ನೆಃ 6 ಫ್ರಾಸಾ.5 ಕೆ.ವಿಜಯಕುಮಾರ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 26.08.2024 ರಂದು ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಸಂಜೆ 5.30 ಗಂಟೆಗೆ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ನಂ.133/2024 ರಂತೆ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ ವ ವರದಿ ನಿವೇದಿಸಿಕೊಂಡಿರುವುದಾಗಿ, ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಪ್ರ ವ ವರದಿಯನ್ನು ನಿಪಿ.6 ಎಂದು, ಅದರಲ್ಲಿರುವ ಸಹಿಯನ್ನು ನಿಪಿ. 6 (ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.2 ಮತ್ತು 3 ರವರಿಗೆ ನೋಟಿಸ್ ನೀಡಿ ಪಂಚನಾಮೆಗೆ ಸಹಕರಿಸಲು ಕೇಳಿಕೊಂಡಿದ್ದು, ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ.5 ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು ನಿಪಿ.5 (ಬಿ) ಎಂದು ಗುರುತಿಸಲಾಯಿತು. ದಿನಾಂಕಃ 27.08.2024 ರಂದು ಚಾಸಾ.2 ಮತ್ತು 3 ರವರ ಸಮಕ್ಷಮ ದೀಟೂರು ಮಹೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಮದ್ಯಾಹ್ನ 1.00 ರಿಂದ 1.45 ರವರೆಗೆ ಕೃತ್ಯ ನಡೆದ ಪಂಚನಾಮೆ ಜರುಗಿಸಿದ್ದು, ಸಾಕ್ಷಿಯು ಗುರುತಿಸಿದ ಸ್ಥಳ ಪಂಚನಾಮೆಯನ್ನು ನಿಪಿ.2 ಎಂದು ಗುರುತಿಸಿದ್ದು, ಅದರಲ್ಲಿರುವ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ಒಂದು ಕಟ್ಟಿಗೆ ಮತ್ತು ಕಲ್ಲನ್ನು ವಶಪಡಿಸಿಕೊಂಡಿರುವುದಾಗಿ, ಸಾಕ್ಷಿಯು ಗುರುತಿಸಿದ ಕಟ್ಟಿಗೆ ಮತ್ತು ಕಲ್ಲನ್ನು ಕ್ರಮವಾಗಿ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಗಿದೆ. ಜಪ್ತು ಪಡಿಸಿಕೊಂಡ ಮಾಲನ್ನು ಪಿಎಫ್ ನಂ. 84/2024 ರಡಿ ನೋಂದಾಯಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ, ನಂತರ ಅದೇ ದಿನ ಚಾಸಾ.2 ಮತ್ತು 4 ರವರ ಹೇಳಿಕೆ ಪಡೆದಿದ್ದು, ಅದೇ ದಿನ ಚಾಸಾ.5 ರವರಿಂದ ಕಲಂ 63(4) ಭಾರತೀಯ ಸಾಕ್ಷ್ಯ ಅಧಿನಿಯಮ ಅಡಿ ಪ್ರಮಾಣ ಪ್ರಮಾಣ ಪತ್ರವನ್ನು ಪಡೆದಿರುವುದಾಗಿ, ಸಾಕ್ಷಿಯು ಗುರುತಿಸಿದ ಪ್ರಮಾಣ ಪತ್ರವನ್ನು ನಿಪಿ.7 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.7 (ಎ) ಎಂದು ಗುರುತಿಸಲಾಯಿತು. ದಿನಾಂಕಃ15.10.2024 ರಂದು ಚಾಸಾ.6 ರವರಿಂದ ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುವುದಾಗಿ, ಸಾಕ್ಷಿಯು ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು ನಿಪಿ.8 ಎಂದು, ಅದರಲ್ಲಿರುವ ಸಹಿಯನ್ನು ನಿಪಿ. 8 (ಎ) ಎಂದು ಗುರುತಿಸಲಾಯಿತು. ದಿನಾಂಕಃ 03.11.2024 ರಂದು ಆರೋಪಿತರು ನಿರೀಕ್ಷಣಾ ಜಾಮೀನಿನ ಆದೇಶದ ಪತ್ರವನ್ನು

ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡು ಆರೋಪಿತರನ್ನು ಬಿಡುಗಡೆ ಮಾಡಿರುವುದಾಗಿ, ನಂತರ ಆರೋಪಿತರ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ಅವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುವುದಾಗಿ, ಆರೋಪಿತರನ್ನು ನೋಡಿದರೆ ಗುರುತಿಸುವುದಾಗಿ ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

| | |
|---|---|
| ಆ.1: | ಆ.5: |
| ಆ.2: | ಆ.6: |
| ಆ.3: | ಆ.7: |
| ಆ.4: | |

ಪ್ರಶ್ನೆಃ 7 ಪ್ರಾಸಾ.6 ನಾಗರಾಜ .ಎಸ್.ಕೆ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24.08.2024 ರಂದು ರಾತ್ರಿ 10.00 ಗಂಟೆ ಸುಮಾರಿಗೆ ರುದ್ರಪ್ಪ ತಂದೆ ಮಲ್ಲೇಶಪ್ಪ, 56 ವರ್ಷ, ಹರಿಹರ ಎಂಬುವವರು ಹಲ್ಲೆಗೆ ಒಳಪಟ್ಟು ಚಿಕಿತ್ಸೆಗೆ ತಮ್ಮನ್ನು ಸಂಪರ್ಕಿಸಿದಾಗ ಅವರನ್ನು ಪರೀಕ್ಷಿಸಿದಾಗ ತನಗೆ ಯಾವುದೇ ಮುರಿತದ ಯಾವುದೇ ಪುರಾವೆಗಳು ಕಂಡುಬಂದಿರುವುದಿಲ್ಲ ಮತ್ತು ರೋಗಿಯು ತನ್ನ ಹಣೆಯ ಮೇಲೆ ಗಾಯ ಮಾಡಿಕೊಂಡಿರುವುದಾಗಿ ಹೇಳಿರುವುದಾಗಿ, ತನ್ನ ಅಭಿಪ್ರಾಯದಲ್ಲಿ ಹೇಳಲಾದ ಗಾಯಗಳು ಸರಳ ಸ್ವರೂಪದಾಗಿದ್ದು, ಆ ಕುರಿತು ತಾನು ನಿಪಿ.8 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಾಗಿ, ಅದರಲ್ಲಿರುವ ಸಹಿಯನ್ನು ನಿಪಿ.8 (ಬಿ)ಎಂದು ಗುರುತಿಸುವುದಾಗಿ ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

| | |
|---|---|
| ಆ.1: | ಆ.5: |
| ಆ.2: | ಆ.6: |
| ಆ.3: | ಆ.7: |
| ಆ.4: | |

ಪ್ರಶ್ನೆಃ 8 ನೀವು ಏನನ್ನಾದರೂ ಹೇಳಬಯಸುವಿರಾ?

ಉತ್ತರಃ

| | |
|---|---|
| ಆ.1: | ಆ.5: |
| ಆ.2: | ಆ.6: |
| ಆ.3: | ಆ.7: |
| ಆ.4: | |

ಪ್ರಶ್ನೆಃ 9 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ

ಆ.1: ಆ.5:

ಆ.2: ಆ.6:

ಆ.3: ಆ.7:

ಆ.4:

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ಸಹಿ/-

ದಿನಾಂಕಃ 18.02.2026 ಪ್ರಧಾನ ಸಿವಿಲ್ ನ್ಯಾಯಾಧೀಶರು

ಸ್ಥಳಃ ಹರಿಹರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ.